# Portraits of the Proud Sons of Piriyapattana

**Dr. Munishamappa A**
Associate Professor,
GFGC, Bangarapet, Kolar

## ಪಿರಿಯಾ ಪಟ್ಟಣದ ಹೆಮ್ಮೆಯ ಪುತ್ರರನ್ನು ಕುರಿತ ವ್ಯಕ್ತಿ ಚಿತ್ರಗಳು

**ಡಾ.ಎ.ಮುನಿಶಾಮಪ್ಪ**

ಡಾ.ಪಿ.ಕೆ.ರಾಜಶೇಖರ್ ಅವರು ಕನ್ನಡ ನಾಡಿನ ಸಮಕಾಲೀನ ಜಾನಪದ ವಿದ್ವಾಂಸರು. ಜಾನಪದ ಸಂಶೋಧಕರಾಗಿ, ಕವಿಯಾಗಿ, ಕತೆಗಾರರಾಗಿ ಜೀವನಚರಿತ್ರೆಕಾರರಾಗಿ ಅವರು ಪ್ರಸಿದ್ಧರಾಗಿದಾರೆ. ಜೀವನ ಚರಿತ್ರೆಕಾರರಾಗಿ ಕಂಪಲಾಪುರ ಆರ್.ಗೋಪಾಲ್ ಮೈಸೂರು ಕೃಷ್ಣಮೂರ್ತಿ ಅವರೊಂದಿಗೆ ಸೇರಿ 'ಸಮಾಜಸೇವಾರತ್ನ' ಮತ್ತು 'ವೀರಯೋಧ ಬೆಳ್ಳಿಯಪ್ಪ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ತಾವು ಕಂಡಂಥ ಪ್ರಾತಃಸ್ಮರಣೀಯರಾದ ಇಬ್ಬರು ಮಹನೀಯರ ವ್ಯಕ್ತಿ ಚಿತ್ರಗಳನ್ನು ವಸ್ತುನಿಷ್ಠವಾಗಿ ಪ್ರಸ್ತುತ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಮೂಲತಃ ಪಿರಿಯಾ ಪಟ್ಟಣದವರಾದ ಇಬ್ಬರು ವ್ಯಕ್ತಿಗಳನ್ನು ಕುರಿತು ಬರೆದಿರುವುದು ಬಹಳ ಔಚಿತ್ಯಪೂರ್ಣವಾಗಿದೆ. ಲೇಖಕರು ಈ ಎರಡು ಕೃತಿಗಳಲ್ಲಿ ಪರಿಚಯಿಸಿರುವ ಇಬ್ಬರು ವ್ಯಕ್ತಿಗಳು ಎರಡು ಭಿನ್ನ ಕ್ಷೇತ್ರಗಳಲ್ಲಿ ತೊಡಗಿದ್ದು ಬದುಕನ್ನು ಸಾರ್ಥಕಪಡಿಸಿಕೊಂಡ ಸ್ಮರಣೀಯರಾಗಿದ್ದಾರೆ. ಒಬ್ಬರು ಸಮಾಜಸೇವಕರಾಗಿ ಜನಮನ್ನಣೆಗೆ ಪಾತ್ರರಾಗಿ, ಹಲವುಪ್ರಶಸ್ತಿಗಳಿಗೆ ಭಾಜನರಾದಗಣ್ಯವ್ಯಕ್ತಿ. ಇನ್ನೊಬ್ಬರು ದೇಶರಕ್ಷಣೆಯ ಕಾಯಕದಲ್ಲಿ ತೊಡಗಿರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರಯೋಧರು. ಇವರಿಬ್ಬರ ಸಾರ್ಥಕ ಬದುಕಿನ ಬಗೆಗೆ ಲೇಖಕರಿಗೆ ಇರುವ ಅಪಾರಅಭಿಮಾನ ಮತ್ತು ಹೆಮ್ಮೆಗಳೇ ಪ್ರಸ್ತುತ ಕೃತಿಗಳ ರಚನೆಗೆ ಸ್ಫೂರ್ತಿಯೆನ್ನಬಹುದು.

'ಸಮಾಜ ಸೇವಾರತ್ನ'ವು ಕೇವಲ ನಲವತ್ತೆರಡು ಪುಟಗಳನ್ನೊಳಗೊಂಡ ಕಿರುಕೃತಿ.ಈ ಕೃತಿಯು 'ಪಿರಿಯಾ ಪಟ್ಟಣ ತಾಲೂಕಿನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳ ಕಾರ್ಯಗಳಲ್ಲೆಲ್ಲ ಸಕ್ರಿಯವಾಗಿ ಪಾಲ್ಗೊಂಡು ಸಮಾಜದ ಹಿತಸಾಧನೆಗಾಗಿ ಅಹರ್ನಿಶಿ ದುಡಿಯುತ್ತಿರುವ ಒಬ್ಬ ಆದರ್ಶ ವ್ಯಕ್ತಿ ಕೆ.ಎಂ.ಶಿವಶಂಕರ್ ಅವರನ್ನು ಕುರಿತದ್ದಾಗಿದೆ. ಕೆ.ಎಂ. ಶಿವಶಂಕರ್ ಅವರಅಪಾರ ಅಭಿಮಾನಿಗಳಲ್ಲೊಬ್ಬರಾದ ಕೇರಳಾಪುರದ ವೀರಭದ್ರಸ್ವಾಮಿಯವರು ಈ ಕೃತಿರಚನೆಗೆ ಪ್ರೇರಣೆ ಮತ್ತು ಒತ್ತಾಸೆಯಾಗಿದ್ದಾರೆಂಬುದಾಗಿ ಲೇಖಕರು ಸ್ಪಷ್ಟ ಪಡಿಸಿದ್ದಾರೆ. ಶಿವಶಂಕರ್ ಅವರ ಸಮಾಜ ಸೇವಾ ಕಾರ್ಯಗಳು ಅವರಿಗೆ ಎಂಥಜನಮನ್ನಣೆಯನ್ನು ಹಾಗೂ ಜನಪ್ರಿಯತೆಯನ್ನು ತಂದುಕೊಟ್ಟಿವೆ ಎಂಬುದನ್ನು ಈ ಸಂಗತಿಯಿಂದ ಅರಿಯಬಹುದು.'ಸಮಾಜ ಸೇವಾರತ್ನ'ದಲ್ಲಿ ಇಪ್ಪತ್ತು ಸಣ್ಣ ಲೇಖನಗಳಿವೆ. ಇಲ್ಲಿನ ಪ್ರತಿಯೊಂದು ಲೇಖನಕ್ಕೂ ಅರ್ಥಪೂರ್ಣವಾದ ಶೀರ್ಷಿಕೆಗಳನ್ನು ಕೊಟ್ಟು ಲೇಖಕರು ಕೆ.ಎಂ.ಶಿವಶಂಕರ್ ಅವರಜೀವನ ಮತ್ತು ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಕೃತಿಯ ಆರಂಭದಲ್ಲಿಯೇ 'ಎನಗಿಂತಕಿರಿಯರಿಲ್ಲ' ಎಂಬ ಶೀರ್ಷಿಕೆಯಡಿಯಲ್ಲಿ ಕೃತಿಯ ಕೇಂದ್ರ ವ್ಯಕ್ತಿಯ ವ್ಯಕ್ತಿತ್ವ ಮತ್ತು ಸಮಾಜಸೇವಾ ಕಾರ್ಯಗಳನ್ನು ಕರಿಯನ್ನು ಕನ್ನಡಿಯಲ್ಲಿ ಅಡಗಿಸಿದಂತೆ ಸಂಕ್ಷಿಪ್ತವಾಗಿ ನಿರೂಪಿಸಿರುವುದು ಉಚಿತವಾಗಿದೆ. ಮುಂದಿನ ಪುಟಗಳಲ್ಲಿ ಸವಿವರವಾಗಿ ದಾಖಲುಗೊಳ್ಳುವ ಅವರ ವ್ಯಕ್ತಿಚಿತ್ರಕ್ಕೆ ಇದು ಪ್ರವೇಶಿಕೆಯಾಗಿದೆ.

ನಂತರದ ಭಾಗಗಳಲ್ಲಿ ಶಿವಶಂಕರ್ ಅವರ ಜನ್ಮ ಸ್ಥಳವಾದ ಪಿರಿಯಾ ಪಟ್ಟಣದ ಐತಿಹಾಸಿಕ ಹಿನ್ನೆಲೆ, ಈ ಪಟ್ಟಣವನ್ನು ಆಳಿದ ರಾಜಮನೆತನ, ಇಲ್ಲಿ ಐತಿಹಾಸಿಕ ಕುರುಹುಗಳಾಗಿ ಉಳಿದಿರುವ ದೇವಾಲಯಗಳು, ಕವಿಗಳು ಹಾಗೂ ಕಾವ್ಯಗಳು, ಶಿವಶಂಕರ್ ಅವರ ತಂದೆ ತಾಯಿಗಳು ಮತ್ತು ಅವರ ಬಂಧುಗಳು ಮುಂತಾದುವುಗಳನ್ನು ಕುರಿತು ನೀಡಿರುವ ಮಾಹಿತಿ ಉಪಯುಕ್ತವಾಗಿದೆ. ಶಿವಶಂಕರ್ ಅವರ ತಂದೆ ಮುದ್ದಪ್ಪ ವೃತ್ತಿಯಿಂದ ವ್ಯಾಪಾರಿಯಾಗಿದ್ದು, ರಾಜಕಾರಣದಲ್ಲಿಯೂ ಆಸಕ್ತಿ ಹೊಂದಿದ್ದ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಇವರಿಗೆ ಸಾರ್ವಜನಿಕ ಚಟುವಟಿಕೆಗಳಲ್ಲಿ ಬಹಳ ಆಸಕ್ತಿ ಇದ್ದುದಲ್ಲದೆ, ಸಮಾಜದಲ್ಲಿನ ದುರ್ಬಲ ವರ್ಗಗಳ ಬಗೆಗೆ ಅಪಾರ ಸಹಾನುಭೂತಿ ಹೊಂದಿದ್ದರು.

ಅವರತಾಯಿ ನಾಗಮ್ಮನವರು ಸುಸಂಸ್ಕೃತರಾದ ಆದರ್ಶಗೃಹಿಣಿಯಾಗಿದ್ದರು. ಇಂಥ ಕುಟುಂಬದಲ್ಲಿ ಜನಿಸಿದ ಶಿವಶಂಕರ್ ಅವರು ಸಮಾಜ ಸೇವಕರಾಗಿರೂಪುಗೊಂಡದ್ದು ಅಚ್ಚರಿಯ ಸಂಗತಿಯಲ್ಲ ಎಂಬಂತೆ ಇಲ್ಲಿನ ನಿರೂಪಣೆಯಿದೆ.

ಶಿವಶಂಕರ್ ಅವರ ಜನನ ಮತ್ತು ಬಾಲ್ಯ ಜೀವನಕ್ಕೆ ಸಂಬಂಧಿಸಿದ ವಿವರಗಳು ಇಲ್ಲಿಯೇ ನಿರೂಪಿತವಾಗಿವೆ. ಲೇಖಕರು ಈ ವಿವರಗಳಲ್ಲಿ ಶಿವಶಂಕರ್ ಅವರ ವ್ಯಕ್ತಿತ್ವಕ್ಕೆ ಅಲೌಕಿಕ ಪರಿವೇಷವೊಂದನ್ನು ನಿರ್ಮಾಣ ಮಾಡಿದ್ದಾರೆ. ಶಿವಶಂಕರ್ ಅವರು ಅಲೌಕಿಕ ವ್ಯಕ್ತಿ, ಅದೃಷ್ಟ ದೇವತೆಯ ವರಪುತ್ರ ಎಂಬಂತೆ ಇಲ್ಲಿಚಿತ್ರಿಸಲಾಗಿದೆ. ಉದಾಹರಣೆಗೆ ಶಿವಶಂಕರ್ ಅವರ ಜನನ ಪೂರ್ವದಲ್ಲಿ ತಾಯಿಗೆ ಬಿದ್ದ ಕನಸು, ಜನನಾ ನಂತರ ಮುದ್ದಪ್ಪನವರು ವ್ಯಾಪಾರದಲ್ಲಿ ಅಪಾರ ಲಾಭ ಗಳಿಸಿ ಆಸ್ತಿ ಸಂಪಾದಿಸಿ ಆರ್ಥಿಕವಾಗಿ ಉನ್ನತಿಗೇರಿದ್ದಲ್ಲದೆ ಊರಿನ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾಗಿ ಪರಿಗಣಿತರಾದದ್ದು ಮುಂತಾದ ವಿವರಗಳನ್ನು ಗಮನಿಸಬಹುದು. ಇಲೆಲ್ಲ ಶಿವಶಂಕರ್ ಅವರು ಹುಟ್ಟಿದ್ದರಿಂದಲೇ ಈ ಎಲ್ಲ ಬೆಳವಣಿಗೆ ಸಾಧ್ಯವಾಯಿತು ಎಂಬಂತೆ ಚಿತ್ರಿಸಿರುವುದು ಶಿವಶಂಕರ್ ಅವರನ್ನು ಅಲೌಕಿಕ ವ್ಯಕ್ತಿಯನ್ನಾಗಿಸುತ್ತದೆ. ಮಹಾ ಪುರುಷರ ಶಕ್ತಿ ಸಾಮರ್ಥ್ಯಗಳು ಮತ್ತು ಅವರ ಗುಣ ವಿಶೇಷಗಳು ಲೋಕಕ್ಕೆ ಗೊತ್ತಾಗಲು ಸೂಕ್ತ ಸಂದರ್ಭ ಮತ್ತು ಸನ್ನಿವೇಶಗಳು ಒದಗಿ ಬರಬೇಕಾಗುತ್ತದೆ. ಅಂಥ ಸಂದರ್ಭವೊಂದು ಶಿವಶಂಕರ್ ಅವರಿಗೂ ಒದಗಿ ಬಂದದ್ದನ್ನು ಲೇಖಕರು ಮರೆಯದೇ ದಾಖಲಿಸಿದ್ದಾರೆ. ಒಮ್ಮೆ ಪಿರಿಯಾ ಪಟ್ಟಣದ ಅಂಬ್ಲಾರೆಯ ಗುಡಿಸಲುಗಳಿಗೆ ಬೆಂಕಿ ಹೊತ್ತಿಕೊಂಡು ಗುಡಿಸಲುಗಳೆಲ್ಲ ಅವುಗಳಲ್ಲಿದ್ದ ದವಸಧಾನ್ಯ, ಸರಕು ಸರಂಜಾಮುಗಳೊಂದಿಗೆ ಸುಟ್ಟು ಹೋಗುತ್ತವೆ. ಆಗ ಶಿವಶಂಕರ್ ಅವರು ಅವುಗಳನ್ನು ಕಳೆದುಕೊಂಡು ನಿರಾಶ್ರಿತರೂ, ನಿರ್ಗತಿಕರೂ ಆದವರಿಗೆ ಅವರ ಊಟ ವಸತಿಗೆ ಬೇಕಾಗುವಷ್ಟು ಹಣ ಕೊಟ್ಟು ಮಾನವೀಯತೆ ಮೆರೆಯುತ್ತಾರೆ. ಈ ಘಟನೆಯಿಂದ ಶಿವಶಂಕರ್ ಅವರ ಔದಾರ್ಯ ಮತು ್ತದಾನ ಗುಣಗಳು ಬೆಳಕಿಗೆ ಬಂದದ್ದಲ್ಲದೆ, ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಗಣ್ಯ ವ್ಯಕ್ತಿಯಾಗಿ ಗುರುತಿಸಿಕೊಳ್ಳುವಂತಾಯಿತು.

ಕೆ.ಎಂ. ಶಿವಶಂಕರ್ ಅವರು ರಾಜಕಾರಣಿಯಾಗಿ ನಿರ್ವಹಿಸಿದ ಪಾತ್ರವನ್ನು ಲೇಖಕರು ವಿವರವಾಗಿ ದಾಖಲಿಸಿದ್ದಾರೆ. ಪಿರಿಯಾ ಪಟ್ಟಣ ಪುರಸಭೆಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಹಲವಾರು ಜನಪರ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡದ್ದನ್ನು ನಿದರ್ಶನಪೂರ್ವಕವಾಗಿ ನಿರೂಪಿಸಲಾಗಿದೆ. ಶ್ರೀಯುತರು ಉಪಾಧ್ಯಕ್ಷ ಪದವಿಯ ಗೌರವಧನವನ್ನೂ ಸಹ ತಮ್ಮ ಸ್ವಂತಕ್ಕೆ ಬಳಸಿಕೊಳ್ಳುತ್ತಿರಲಿಲ್ಲ ಎಂಬ ಸಂಗತಿಯನ್ನು ಲೇಖಕರು ಅಭಿಮಾನದಿಂದ ಸ್ಮರಿಸಿದ್ದಾರೆ.

ಶಿವಶಂಕರ್ ಅವರ ದೈವಭಕ್ತಿಯ ಸ್ವರೂಪ ಮತು ್ತಅವರು ದೇವರಲ್ಲಿ ಇಟ್ಟಿದ್ದ ಅಪಾರ ನಂಬಿಕೆ ಹಾಗೂ ನಿಷ್ಠೆಗಳಿಂದ ಅವರ ಜೀವನದಲ್ಲಿ ನಡೆದವೆನ್ನಲಾದ ಕೆಲವು ಪವಾಡ ಸದೃಶ ಘಟನೆಗಳನ್ನು 'ನಂಬಿ ಕೆಟ್ಟವರಿಲ್ಲ' ಎಂಬ ಶೀರ್ಷಿಕೆಯ ಅಡಿಯಲ್ಲಿ ನೋಡಬಹುದು. ಶಿವಶಂಕರ್ ಅವರು ಕಳೆದುಕೊಂಡಿದ್ದ ಹಣಸಿಕ್ಕಿದ್ದು ಕೇರಳಾಪುರದ ವೀರಭದ್ರೇಶ್ವರ ಸ್ವಾಮಿಯ ಕೃಪೆಯಿಂದ ಎಂಬುದಾಗಿ ದೃಢವಾಗಿ ನಂಬಿದ್ದಾರೆ. ಅವರು ಮಲೆ ಮಹದೇಶ್ವರ ಸ್ವಾಮಿಯ ದರ್ಶನಕ್ಕೆಂದು ಕಾರಿನಲ್ಲಿ ಹೊರಟಿದ್ದ ಸಂದರ್ಭದಲ್ಲಿ ಬೆಟ್ಟದ ಮಾರ್ಗ ಮಧ್ಯದಲ್ಲಿ ಕಾರು ನಿಂತು ಹೋದಾಗ ಲಾರಿ ಡ್ರೈವರನ ರೂಪದಲ್ಲಿ ಕಾಣಿಸಿಕೊಂಡು ನೀರು ಕೊಟ್ಟು ಕಾರು ಚಲಿಸುವಂತೆ ಮಾಡಿದ್ದು ಮಲೆಯ ಮಹದೇಶ್ವರನಲ್ಲದೆ ಬೇರೆಯಲ್ಲವೆಂದು ಶಿವಶಂಕರ್ ಅವರು ಹೇಳಿರುವುದನ್ನು ಲೇಖಕರು ದಾಖಲಿಸಿದ್ದಾರೆ. ದೇವಾಲಯವೊಂದಕ್ಕೆ ಶಿವಶಂಕರ್ ಅವರು ನೀಡಿದ್ದ ಗೋಲಕವನ್ನು ಕಳ್ಳರಿಂದ ರಕ್ಷಿಸಿದ್ದು ಹಾಗೂ ಇನ್ನೊಮ್ಮೆ ಅವರಿಗೆ ಕಾಡಿನ ಹಾದಿಯಲ್ಲಿ ಒಂಟಿ ಸಲಗದಿಂದ ಅಪಾಯ ಸಂಭವಿಸದೇ ಇದ್ದದ್ದು ಮುಂತಾದ ಸಂಗತಿಗಳು ಕೃತಿಯಲ್ಲಿ ಪವಾಡಗಳೆಂಬಂತೆ ನಿರೂಪಿತವಾಗಿವೆ. ಈ ಘಟನೆಗಳನ್ನು ಲೇಖಕರು ತಾವು ಕೇಳಿಸಿಕೊಂಡ ರೀತಿಯಲ್ಲಿಯೇ ಯಥಾವತ್ತಾಗಿ ನಿರೂಪಿಸುತ್ತಾರೆಯೇ ಹೊರತು ಈ ಕಥೆಗಳ ಹಿಂದಿನ ನೈಜತೆಯನ್ನು ಪರಿಶೀಲಿಸುವುದಿಲ್ಲ. ಲೇಖಕರಿಗೆ ಶಿವಶಂಕರ್ ಅವರ ಮಾತಿನಲ್ಲಿ ಪೂರ್ಣ ವಿಶ್ವಾಸವಿರುವುದರಿಂದ ಅವರು ಹೇಳುವದನ್ನು ಯಥಾವತ್ತಾಗಿ ದಾಖಲಿಸಿದ್ದಾರೆ.

ಕೃತಿಯ ಉತ್ತರಾರ್ಧವು ಬಹು ಮಟ್ಟಿಗೆ ಶಿವಶಂಕರ್ ಅವರ ದಾನ ಧರ್ಮಾದಿಗಳ ಮತ್ತು ಅವರು ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಸಕ್ರಿಯವಾಗಿ ತೊಡಗಿಸಿಕೊಂಡ ವಿವರಗಳಿಂದ ತುಂಬಿದೆ. ಹಲವು ದೇವಾಲಯಗಳು ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಶಿವಶಂಕರ್ ಅವರು ನೀಡಿದ ದಾನಗಳನ್ನು ಇಲ್ಲಿ ನಮೂದಿಸಿ ಅವರ ಔದಾರ್ಯವನ್ನು ಪ್ರಶಂಸಿಸಲಾಗಿದೆ. ಜೊತೆಗೆ ಅವರ ಸೇವಾ ಕಾರ್ಯಗಳನ್ನು ಗುರುತಿಸಿ ವಿವಿಧ ಸಂಘ ಸಂಸ್ಥೆಗಳು ಅವರಿಗೆ ನೀಡಿದ ಬಿರುದುಗಳ

ವಿವರಗಳು ಈ ಭಾಗದಲ್ಲಿವೆ. 'ಸಮಾಜ ಸೇವಾರತ್ನ' ಎಂಬುದು ಅವುಗಳಲ್ಲೊಂದಾಗಿದೆ. ಈ ರೀತಿಯಲ್ಲಿ ಡಾ.ಪಿ.ಕೆ.ರಾಜಶೇಖರ್ ಅವರು ಕೆ.ಎಂ.ಶಿವಶಂಕರ್ ಅವರ ಬದುಕಿನ ವಿವಿಧ ಮಗ್ಗಲುಗಳನ್ನು 'ಸಮಾಜ ಸೇವಾರತ್ನ' ಕೃತಿಯಲ್ಲಿ ಬಿಡಿಸಿಟ್ಟಿದ್ದಾರೆ.

ದೇಶ ರಕ್ಷಣೆಯ ಕಾರ್ಯದಲ್ಲಿ ತೊಡಗಿದ್ದು, ರಾಷ್ಟ್ರಕ್ಕಾಗಿ ಪ್ರಾಣಾರ್ಪಣೆ ಮಾಡಿ ಹುತಾತ್ಮರಾದ ಬೆಳ್ಳಿಯಪ್ಪನವರಿಗೆ ಲೇಖಕರು ಸಲ್ಲಿಸಿದ ಶ್ರದ್ಧಾಂಜಲಿಯ ಫಲವಾಗಿ 'ವೀರಯೋಧ ಬೆಳ್ಳಿಯಪ್ಪ' ಕೃತಿರಚನೆಯಾಗಿದೆ. ಸಾಮಾನ್ಯವಾಗಿ ವ್ಯಕ್ತಿ ಚಿತ್ರಗಳ ರಚನೆಯಲ್ಲಿ, ಅದರಲ್ಲಿಯೂ ಹುತಾತ್ಮರನ್ನು ಕುರಿತು ಬರೆಯುವಾಗ ಲೇಖಕರಿಗೆ ಸ್ವಲ್ಪ ಮಟ್ಟಿಗಿನ ಆರಾಧನ ಭಾವವಿರುತ್ತದೆ. ಆದರೆ ಪ್ರಸ್ತುತ 'ವೀರಯೋಧ ಬೆಳ್ಳಿಯಪ್ಪ' ಕೃತಿಯು ಅಂಥ ಮಿತಿಗೆ ಒಳಗಾಗಿಲ್ಲವೆಂದು ಧೈರ್ಯವಾಗಿ ಹೇಳಬಹುದು. ಬೆಳ್ಳಿಯಪ್ಪನವರ ವ್ಯಕ್ತಿಚಿತ್ರದಲ್ಲಿ ಲೇಖಕರು ನಿರ್ಲಿಪ್ತತೆಯನ್ನು ಕಾಯ್ದುಕೊಂಡಿರುವುದರಿಂದ ಈ ಕೃತಿ ಹೆಚ್ಚು ವಸ್ತುನಿಷ್ಠವಾಗಿದೆ.

ಪ್ರಸ್ತುತ ಕೃತಿಯಲ್ಲಿ ಲೇಖಕರು ಬೆಳ್ಳಿಯಪ್ಪನವರ ಜೀವನದ ಹಲವು ಘಟ್ಟಗಳನ್ನು ಚಾರಿತ್ರಿಕ ನೆಲೆಯಲ್ಲಿ ನಿರೂಪಿಸಿದ್ದಾರೆ. ಈ ಕೃತಿಯು ಕೇವಲ ನಲವತ್ತೆಂಟು ಪುಟಗಳಿದ್ದು, ಹದಿನಾರು ಅರ್ಥಪೂರ್ಣ ಶಿರ್ಷಿಕೆಗಳನ್ನೊಳಗೊಂಡ ಸಣ್ಣ ಲೇಖನಗಳಿವೆ. ಕೃತಿಯ ಪೂರ್ವಾರ್ಧದಲ್ಲಿ ಬೆಳ್ಳಿಯಪ್ಪನವರ ಹುಟ್ಟೂರಾದ ಪಿರಿಯಾಪಟ್ಟಣ ತಾಲೂಕಿನ ಲಿಂಗಾಪುರದ ನಿಸರ್ಗ ಸೌಂದರ್ಯ, ಅಲ್ಲಿನ ಜನರು ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿ ಕಷ್ಟ ಪಡುವ ರೀತಿ, ಬೆಳ್ಳಿಯಪ್ಪನವರ ಪೂರ್ವಿಕರ ಹಾಗೂ ತಂದೆ ತಾಯಿಗಳ ವಿವರಗಳಿವೆ. ಕೃತಿಯ ಅರ್ಧಕ್ಕಿಂತ ಹೆಚ್ಚು ಪುಟಗಳಲ್ಲಿ ಈ ವಿವರಗಳಿದ್ದು, ಬೆಳ್ಳಿಯಪ್ಪನವರು ಹುಟ್ಟಿ ಬೆಳೆದ ಪರಿಸರ, ಅವರ ಸಾಮಾಜಿಕ ಮತ್ತು ಕೌಟುಂಬಿಕ ಹಿನ್ನೆಲೆಗಳನ್ನು ಅರಿಯಲು ಸಹಕಾರಿಯಾಗಿವೆ. ಬೆಳ್ಳಿಯಪ್ಪನವರ ಬಾಲ್ಯ ಮತ್ತು ವಿಧ್ಯಾಭ್ಯಾಸಗಳಿಗೆ ಸಂಬಂಧಿಸಿದ ಭಾಗದಲ್ಲಿ ಅನಗತ್ಯ ವಿವರಗಳಿಲ್ಲದೆ, ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಬೆಳ್ಳಿಯಪ್ಪನವರು ಸೈನಿಕ ಸೇವೆಗೆ ಸೇರ್ಪಡೆಯಾಗಿ ಬಹು ಬೇಗ ವಿವಿಧ ಉನ್ನತ ಹುದ್ದೆಗಳಿಗೆ ಬಡ್ತಿ ಹೊಂದಿದ ಹಾಗೂ ಸೇವೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ದಕ್ಷತೆಯನ್ನು ಮೆರೆದ ವಿವರಗಳು ನಿದರ್ಶನ ಪೂರ್ವಕವಾಗಿ ನಂತರದ ಪುಟಗಳಲ್ಲಿ ದಾಖಲಾಗಿವೆ. ಕೊನೆಯ ಭಾಗದ 'ಆ ಘೋರ ದುರ್ಘಟನೆ' ಎಂಬ ಶೀರ್ಷಿಕೆಯಡಿಯಲ್ಲಿ ನಿರೂಪಿತಗೊಂಡಿರುವ ವಿವರಗಳು ಓದುಗರ ಮನ ಕರಗಿಸುತ್ತವೆ. ಸೈನ್ಯದ ವೈದ್ಯಕೀಯ ವಿಭಾಗದಲ್ಲಿ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಬೆಳ್ಳಿಯಪ್ಪನವರು ಹಿಮಪಾತದಿಂದ ಮಂಜುಗಡ್ಡೆಯ ಅಡಿಯಲ್ಲಿ ಸಿಲುಕಿದ್ದ ಮೇಲಧಿಕಾರಿಯನ್ನು ಪ್ರಾಣಾಪಾಯದಿಂದ ರಕ್ಷಿಸಿ, ಹಿಮಜಲದ ಪ್ರವಾಹದಲ್ಲಿ ಕೊಚ್ಚಿ ಹೋಗಿ ಶವವಾಗುವ ಬೆಳ್ಳಿಯಪ್ಪನವರ ಬಗೆಗೆ ಓದುಗರಿಗೆ ಸಂಕಟವಾಗುತ್ತದೆ. ಕೃತಿಯಲ್ಲಿ ಈ ಭಾಗ ಕರುಣಾಜನಕವಾದುದುದಾಗಿದೆ. ಲೇಖಕರು ಈ ಭಾಗವನ್ನುಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಅನಂತರದ ಬೆಳ್ಳಿಯಪ್ಪನವರ ಅಂತ್ಯ ಸಂಸ್ಕಾರದ ವಿವರಗಳಲ್ಲಿ ಸರಕಾರ ಮತ್ತು ಪಿರಿಯಾಪಟ್ಟಣದ ಜನತೆ ಬೆಳ್ಳಿಯಪ್ಪನವರಿಗೆ ಸಮರ್ಪಿಸಿದ ಗೌರವ ಮತ್ತು ಆ ವೇಳೆಗಾಗಲೇ ಬೆಳ್ಳಿಯಪ್ಪನವರು ಗಳಿಸಿದ್ದ ಅಭಿಮಾನಿಗಳ ಸಂಖ್ಯೆಯನ್ನು ಅರಿಯಬಹುದು. ಬೆಳ್ಳಿಯಪ್ಪನವರು ಸೈನಿಕ ವೃತ್ತಿಯಲ್ಲಿದ್ದುಕೊಂಡು, ಅಪಾರವಾದ ಅಭಿಮಾನಿಗಳನ್ನು ಸಂಪಾದಿಸಿ ಜನಪ್ರಿಯತೆ ಗಳಿಸಿದ್ದು ಅಚ್ಚರಿಯೆನಿಸುತ್ತದೆ. ಈಗಾಗಲೇ ಪ್ರಸ್ತಾಪಿಸಿದಂತೆ ಬಹುತೇಕ ವ್ಯಕ್ತಿಚಿತ್ರಗಳಲ್ಲಿ ಕೆಲವು ಪೂರ್ವಗ್ರಹೀತ ನಿಲುವುಗಳು ನುಸುಳುವುದು ಹಾಗೂ ಬರವಣಿಗೆ ವರ್ಣನಾತ್ಮಕವಾಗುವುದು ಸಾಮಾನ್ಯ. ಪ್ರಸ್ತುತ 'ಸಮಾಜ ಸೇವಾ ರತ್ನ' ಮತ್ತು 'ವೀರಯೋಧ ಬೆಳ್ಳಿಯಪ್ಪ' ಕೃತಿಗಳು ಅಂಥ ಮಿತಿಗಳಿಗೆ ಒಳಗಾಗದೆ ನಿಜವಾದ ಜೀವನ ಚರಿತ್ರೆಗಳಾಗಿವೆ. ಕನ್ನಡದ ಜೀವನ ಚರಿತ್ರೆಗಳ ಸಾಲಿಗೆ ಡಾ.ಪಿ.ಕೆ.ರಾಜಶೇಖರ ಅವರ ಈ ಎರಡು ಕೃತಿಗಳು ಉತ್ತಮ ಸೇರ್ಪಡೆಗಳಾಗಿವೆ.

------------- ೞ -------------